

ಹಿಂದಿನ ಮಹಾರಾಜರು ಹುಲಿ ಹೊಡೆದರೂ ಈ ರೀತಿ ರೋಡ್ ಷೋ ಇರುತ್ತಿರಲಿಲ್ಲವೇನೋ! ಬಾಂಗ್ಲಾದೇಶದಲ್ಲಿ ಇಲಿ ಹೊಡೆದಿದ್ದಕ್ಕೆ ರಸ್ತೆಯಲ್ಲಿ ಇಲಿ ಶವ ಸಮೇತ ಮೆರವಣಿಗೆ ನಡೆಯಿತು. 83 ಸಾವಿರ ಇಲಿ ಕೊಂದ ಧೀರನಿಗೆ ವೀರೋಚಿತ ಸನ್ಮಾನ, ಟಿವಿ ಕೊಡುಗೆ.. ಇಲ್ಲಿಗೇ ಮುಗಿಯಲಿಲ್ಲ, ಈ ವೀರನ ಮೇಲೆ ಇನ್ನಷ್ಟು ಇಲಿ ಸಂಹಾರದ ಹೊಣೆ.

ಮೆಲ್ಬರ್ನ್ ವಿಶ್ವವಿದ್ಯಾನಿಲಯದ ಆವರಣದಲ್ಲಿ 379 ಮಂದಿ ಸೇರಿದರು. ಶ್ರಮದಾನಕ್ಕಾ, ಇಲ್ಲ ಪ್ರತಿಭಟನೆಗಾ ಎಂದು ಜನ ಕಾದು ನೋಡಿದರು. ಒಬ್ಬೊಬ್ಬರೂ ರೋಬಾಟ್ ಧಿರಿಸು ಧರಿಸಿ ಕೈ- ಕಾಲಿಗೆ ಪಾರ್ಶ್ವವಾಯು ಬಡಿದಂತೆ ಚಲಿಸಿದರು. ಅಲ್ಲಿಗೆ ರೆಕಾರ್ಡ್ ಮುರಿದು ಬಿತ್ತು ಎಂಬ ಘೋಷಣೆ ಕೇಳಿಬಂತು. ಜನ ಮುರಿದು ಬಿದ್ದ ರೆಕಾರ್ಡ್ ಚೂರುಗಳನ್ನು ಹುಡುಕಿದರೋ ಎಂಬುದು ಗೊತ್ತಾಗಲಿಲ್ಲ.





ಜಗತ್ತಿನ 10 ವಿಷಕಾರಿ ಹಾವುಗಳಲ್ಲಿ ಐದು ಆಸ್ಟ್ರೇಲಿಯಾದಲ್ಲಿವೆ. ಆದರೆ ತನ್ನ ಊಟದ ಎಲೆಯಲ್ಲಿ ಎಮ್ಮೆ ಸತ್ತು ಬಿದ್ದರೂ.. ಎಂಬ ಗಾದೆ ಇದೆಯಲ್ಲ ಅದರಂತೆ ನಡೆದುಕೊಂಡರು ಆಸ್ಟ್ರೇಲಿಯನ್ನರು. ಹಾವು ವಿಷಕಾರಿಯೋ, ಪಕ್ಕದ ನ್ಯೂಜಿಲೆಂಡ್‌ನಲ್ಲಿರುವ ಜೇಡ ವಿಷಕಾರಿಯೋ ಎಂದು ಸಮೀಕ್ಷೆ ಮಾಡಿದರೆ 'ಜೇಡ' ಎಂದರಂತೆ!

ದಕ್ಷಿಣ ಆಫ್ರಿಕಾದ ಮಿಲ್ಟನ್ ಒಟ್ಟಿಗೇ ನಾಲ್ಕು ಮದುವೆ ಮಾಡಿಕೊಂಡಿದ್ದಾನೆ. ಆರ್ಥಿಕ ಕುಸಿತದ ಸಂದರ್ಭದಲ್ಲಿ ದುಡ್ಡು ಉಳಿಸಲಂತೆ. ಅದು ಸರಿ, ಆದರೆ ನಾಲ್ಕು ನಾಲ್ಕು ಹೆಂಡಿರನ್ನು ಸಾಕುವುದು ಹೊರೆಯಲ್ಲವೇ ಎಂದರೆ, ಒಬ್ಬಳು ಹೆಂಡತಿ, 30 ಗೆಳತಿಯರನ್ನು ಇಟ್ಟುಕೊಳ್ಳುವುದಕ್ಕಿಂತ ನಾಲ್ಕು ಹೆಂಡತಿಯರೇ ಉತ್ತಮವಂತೆ. ಸ್ನೇಹಿತೆಯರಿಗಿಂತ ಪತ್ನಿಯರ ಮಧ್ಯೆ ಆರೋಗ್ಯಕರ ಸ್ಪರ್ಧೆ ಇರುವುದಂತೆ.



ಒಂದು ದೊಡ್ಡ ಶಾಲಾ ಬಸ್‌ನಷ್ಟಿರುವ ಪ್ರಾಚೀನ ಶಾರ್ಕ್‌ನ ಅಸ್ಥಿಪಂಜರ. 180 ಹಲ್ಲುಗಳು. ಲಾಸ್‌ವೇಗಾಸ್‌ನಲ್ಲಿ ಈಗ ಹರಾಜಿಗಿದೆ. 12 ಲಕ್ಷ ಡಾಲರ್‌ಗೆ ಮಾರಾಟವಾಗುವ ನಿರೀಕ್ಷೆಯಂತೆ. ಖರೀದಿಸುವವ ಏನು ಮಾಡುತ್ತಾನೋ ಎನ್ನುವುದಕ್ಕಿಂತ ಅಸ್ಥಿಪಂಜರ ಕೊಂಡರೆ ಹುಡುಗಿ ಉಚಿತವೇ ಎಂಬ ಕುತೂಹಲ.

ಎಲ್ಲೆಡೆ ದೇಶದ ಸ್ವಾತಂತ್ರ್ಯೋತ್ಸವದಲ್ಲಿ ಸೈನಿಕರು ನೇರ ನಿಂತು ಸೆಲ್ಯೂಟ್ ಹೊಡೆದರೆ ದಕ್ಷಿಣ ಕೊರಿಯಾ ಯೋಧರು ಉಲ್ಟಾ ತಿರುಗಿ ಗೌರವ ವಂದನೆ ನೀಡಿದರು. ಅಲ್ಲಿಯ ಸೈನಿಕರಿಗೆ ಸಮರ ಕಲೆ ಕಲಿಯುವುದು ಕಡ್ಡಾಯವಂತೆ. ಜಾಣರು! ಶಸ್ತ್ರಾಸ್ತ್ರ ಖರೀದಿಗೆ ಹಣ ಉಳಿಸುವ ತಲೆ.

ಬ್ರಿಟನ್ನಿನ ಬಾಲೆಯೊಬ್ಬಳು ಕಿರಿಕಿರಿ ಮಾಡುವ ಅಜ್ಜಿಯನ್ನೇ ಇ-ಬೇ ಅಂತರ್ಜಾಲದಲ್ಲಿ ಮಾರಾಟಕ್ಕಿಟ್ಟಿದ್ದಾಳೆ. ಅಜ್ಜಿ ಕ್ರಾಸ್‌ವರ್ಡ್ ಮಾಡುತ್ತಾಳೆ, ಮುದ್ದಾಡುತ್ತಾಳೆ.. ಎಂಬ ಆಮಿಷ ಬೇರೆ ತೋರಿಸಿದ್ದಾಳಂತೆ. ವಯಸ್ಸು 61. ಇಲ್ಲವಾದರೆ ಖರೀದಿಸಬಹುದಿತ್ತು ಎಂದು ಯೋಚಿಸುವ ಹಾಗೂ ಇಲ್ಲ, ಇ-ಬೇ ಈ ಜಾಹೀರಾತನ್ನು ವಾಪಸ್ಸು ತಗೊಂಡಿದೆ.



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65